## ಉದ್ಯಾನ ಇಲಾಖೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

## ಫೂನ ನಂ. 0836-2215245 , 8762270302

ನಂ. ಕವಿವಿ/ಉದ್ಯಾನ/2019-20/ **ಟೆಂಡರ ವ ಬಹಿರಂಗ ಹರಾಜು** ದಿನಾಂಕ : 2-6-2020

ಕರ್ನಾಟಕ ವಿಶ್ವವಿದ್ಯಾಲಯದ ಆವರಣದಲ್ಲಿ ಮಹಾಮನೆ ಬಡಾವಣೆಗೆ ಹೊಂದಿಕೊಂಡ ಸ್ಥಳದಲ್ಲಿ 70- ನೀಲಗಿರಿ ಗಿಡಗಳನ್ನು ಟೆಂಡರ ವ ಬಹಿರಂಗ ಹರಾಜನ್ನು ಉದ್ಯಾನ ವಿಭಾಗದಲ್ಲಿ ಏರ್ಪಡಿಸಲಾಗಿದೆ

| | |
|---|---|
| ಟೆಂಡರ ಪಾರ್ಮ ಪಡೆಯುವದಕ್ಕೆ ಕಡೆಯ ದಿನ | 19-6-2020 ಮದ್ಯಾಹ್ನ 1.00 ಘಂಟೆ |
| ಭರ್ತಿ ಮಾಡಿದ ಟೆಂಡರ ಪಾರ್ಮನ್ನು ಬಾಕ್ಸನಲ್ಲಿ ಹಾಕುವದಕ್ಕೆ | 19-6-2020 ಸಾಯಂಕಾಲ 2.30 ಘಂಟೆ |
| ಹರಾಜಿನಲ್ಲಿ ಭಾಗವಹಿಸುವದಕ್ಕೆ | 19-6-2020 ಸಾಯಂಕಾಲ 3.00 ಘಂಟೆಯ ನಂತರ |
| ಟೆಂಡರನಲ್ಲಿ ಭಾಗವಹಿಸುವದಕ್ಕೆ ಕಟ್ಟಬೇಕಾದ ಠೇವಣಿ ಹಣ | 1,00,000=00 |
| ಪಸಲು ಕೊಂಡವರು ಕಟ್ಟಬೇಕಾದ ಸುರಕ್ಷಾ ಠೇವಣಿ ಹಣ | 10,000=00 |
| ಟೆಂಡರ ಪಾರ್ಮ ಹಣ | 1,700=00 + 18% CGST and SGST(306=00) |

ಗಿಡಗಳನ್ನು ಚನ್ನಾಗಿ ಗುರುತಿಸಿಕೊಂಡು **"ಹಣಕಾಸು ಅಧಿಕಾರಿಗಳು, ಕ.ವಿ.ವಿ. ಧಾರವಾಡ"** ಇವರ ಹೆಸರಿನಲ್ಲಿ ಮೇಲೆ ತಿಳಿಸಿದ ಪಸಲು ಠೇವಣಿ ಹಣದ ಡಿ.ಡಿ. ಯೊಂದಿಗೆ ತಮ್ಮ ಟೆಂಡರ ದರವನ್ನು **ನಿಗದಿತ ಪಾರ್ಮ** ನಲ್ಲಿ ಬರೆದು ಹಾಕಬೇಕು. ಫಾರ್ಮಗಳನ್ನು ರೂ. ರೂ. **1700=00** + CGST and SGST **(18 %)**= ಒಟ್ಟು ರೂ. **2006=00**. ರೂ. **1700=00** ಗಳನ್ನು ಚಲನ ಮೂಲಕ ಬ್ಯಾಂಕಿಗೆ ತುಂಬಿ ಉದ್ಯಾನ ವಿಭಾಗದಲ್ಲಿ ತೋರಿಸಿದಾಗ ಟೆಂಡರ ಪಾರ್ಮ ಕೊಡಲಾಗುವದು. CGST and SGST **(306=00)** ಹಣವನ್ನು ನಗದು ರೂಪದಲ್ಲಿ ನೀಡಬೇಕು. ಸದರ ಪ್ರಕ್ರಿಯಯಲ್ಲಿ ಭಾಗವಹಿಸುವವರು ಕಡ್ಡಾಯವಾಗಿ ಟೆಂಡರ ಪಾರ್ಮ ಪಡೆಯಲೇ ಬೇಕು ಮತ್ತು ಟೆಂಡರ ಬಾಕ್ಸನಲ್ಲಿ ಹಾಕಬೇಕು. ಟೆಂಡರ ಪಾರ್ಮ ತುಂಬಿ ಟೆಂಡರ ಡಬ್ಬದಲ್ಲಿ ಹಾಕದೇ ನೇರವಾಗಿ ಬಹಿರಂಗ ಹರಾಜಿನಲ್ಲಿ ಭಾಗವಹಿಸಬಹುದಾಗಿದೆ.

**ಟೆಂಡರ ಕರಾರುಗಳು :**

1. ಹಣಕಾಸು ಅಧಿಕಾರಿಗಳು, ಕ.ವಿ.ವಿ. ಧಾರವಾಡ ಇವರ ಹೆಸರಿನಲ್ಲಿ ಮೇಲೆ ತಿಳಿಸಿದ ಪಸಲು ಠೇವಣಿ ಹಣದ ಡಿ.ಡಿ. ಯನ್ನು ಲಗುತ್ತಿಸಬೇಕು. ನಿಗದಿತ ಪಾರ್ಮನ್ನು ಪಡೆಯಲು ಇಚ್ಚಿಸುವವರು ನಿಗದಿತ ಹಣ ಕಟ್ಟಿ ಚಲನನ್ನು ಉದ್ಯಾನ ಇಲಾಖೆಯಲ್ಲಿ ಕೊಟ್ಟು ಟೆಂಡರ ಪಾರ್ಮ ಪಡೆದುಕೊಳ್ಳಬಹುದು. ಪಾರ್ಮಿಗೆ ಸಂಬಂದಿಸಿದಂತೆ ತುಂಬಿದ ಹಣವನ್ನು ಯಾವುದೇ ಕಾರಣಕ್ಕಾಗಿ ಮರುಳಿಸಲಾಗುವದಿಲ್ಲಾ.
2. ದಿನಾಂಕ **19-6-2020** ರಂದು ಮದ್ಯಾನ **2.30** ಗಂಟೆ ಒಳಗಾಗಿ ಉದ್ಯಾನ ಇಲಾಖೆಯಲ್ಲಿರುವ ಸೀಲು ಮಾಡಿದ ಟೆಂಡರ ಪೆಟ್ಟಿಗೆಯಲ್ಲಿ ಹಾಕಬೇಕು ತದ ನಂತರ ಬಂದವರನ್ನು ಪರಿಗಣಿಸಲಾಗುವದಿಲ್ಲಾ. ಮತ್ತು ಅದೇ ದಿವಸ ಮದ್ಯಾಹ್ನ **3.00** ಗಂಟೆಗೆ ಬಹಿರಂಗು ಹರಾಜು ಏರ್ಪಡಿಸಲಾಗುವದು. ಮೋಹರಾದ ಟೆಂಡರಗಳನ್ನು ಹರಾಜಿನ ನಂತರ ತೆರೆದು ಹೆಚ್ಚಿನ ಬೇಡಿಕೆದಾರರಿಗೆ, ಪಸಲು ಹರಾಜು ಸಮೀತಿ ಸದಸ್ಯರಿಗೆ ಹಾಗೂ ಮೇಲಾಧಿಕಾರಿಗಳಿಗೆ ಒಪ್ಪಿಗೆಯಾದಲ್ಲಿ ಮಾತ್ರ ಗಿಡಗಳನ್ನು ನೀಡಲಾಗುವದು.
3. ಕಡ್ಡಾಯವಾಗಿ ಗುರುತಿನ ಧಾಖಲೆಗಳನ್ನು ಆದಾರ ಕಾರ್ಡ/ವೋಟರ್ಸ ಕಾರ್ಡ್/ಡ್ರೈವಿಂಗ ಲಯಸನ್ಸ್/ ಪಡಿತರ ಕಾರ್ಡ ಯಾವುದಾದರು ಒಂದನ್ನು ಸ್ಪಷ್ಟವಾಗಿ ಇರುವ ಜಿರಾಕ್ಸ ಪ್ರತಿಯನ್ನು ತಮ್ಮ ಸಹಿ ಮಾಡಿ ಲಗತ್ತಿಸಬೇಕು.
4. ಇತ್ತಿಚಿನ ಅಯ್. ಟಿ. ರಿಟರ್ನ್ಸ ಪೈಲ ಮಾಡಿದ ಜಿರಾಕ್ಸ ಪ್ರತಿ ಮತ್ತು ಜಿ.ಎಸ್.ಟಿ ನೊಂದಣಿ ಸರ್ಟಿಪಿಕೇಟ ಜಿರಾಕ್ಸ ಪ್ರತಿ ಲಗತ್ತಿಸಬೇಕು.
5. ಟೆಂಡರ/ಬಹಿರಂಗ ಹರಾಜಿನಲ್ಲಿ ಹೆಚ್ಚಿನ ಬೆಲೆಗೆ ಪಸಲು ಪಡೆದವರು ಪಸಲು ಮೊತ್ತದಲ್ಲಿ ಠೇವಣಿ ಹಣ ವಜಾಗೊಳಿಸಿ ಉಳಿದ ಹಣದ **50% ಹಣವನ್ನು** ಮರು ದಿನ ಬ್ಯಾಂಕಿನ ಅವದಿವೊಳಗೆ ತುಂಬಬೇಕು. ಒಂದು ವೇಳೆ ತಾವು ಹಣವನ್ನು ತುಂಬದಿದ್ದಲ್ಲಿ ತಾವು ತುಂಬಿದ ಠೇವಣಿ ಹಣವನ್ನು ಮುಟ್ಟುಗೋಲು ಹಾಕಿಕೊಂಡು, ಅದೇ ವೇಳೆಗೆ ತಾವು ಕೊಂಡ ಪಸಲುಗಳನ್ನು ಎರಡನೇಯ ಬೇಡಿಕೆದಾರರಿಗೆ ನೀಡಬಹುದಾಗಿದೆ. ಅದಕ್ಕೆ ತಮ್ಮ ಯಾವುದೇ ತಂಟೆ ತಕರಾರುಗಳನ್ನು ಪರಿಗಣಿಸುವದಿಲ್ಲಾ.
6. ಟೆಂಡರ:ಬಹಿರಂಗ ಹರಾಜು ದರಗಳು ಮೇಲಾಧಿಕಾರಿಗಳಿಂದ ಅಂಗಿಕೃತವಾಗಿ ಬಂದ ನಂತರ ಇನ್ನೂಳಿದ ಹಣವನ್ನು ತುಂಬಲು ಸೂಚಿಸಿದಾಗ ನಿಗದಿತ ಸಮಯದಲ್ಲಿ ಹಣವನ್ನು ತುಂಬದಿದ್ದಲ್ಲಿ ತಾವು ತುಂಬಿದ ಠೇವಣಿ ಹಣ ಹಾಗು ಶೇಖಡಾ **50% ರಷ್ಟು** ತುಂಬಿದ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವದು. ಮೇಲ್ಕಂಡ ಗಿಡಗಳಿಗೆ ಯೋಗ್ಯ ಧಾರಣಿಯು ಬಾರದಿದ್ದಲ್ಲಿ ಟೆಂಡರ: ಬಹಿರಂಗ ಹರಾಜು ದರ ಸ್ವಿಕರಿಸುವ ಅಥವಾ ನೀರಾಕರಿಸುವ ಹಕ್ಕನ್ನು ಮೇಲಾಧಿಕಾರಿಗಳಿಗೆ ಕಾಯ್ದಿರಿಸಿದೆ.
7. ಪಸಲು ತೆಗೆದುಕೊಂಡವರು ಕಡ್ಡಾಯವಾಗಿ ಸುರಕ್ಷಾ ಠೇವಣಿ ಕಟ್ಟತಕ್ಕದ್ದು. ಸುರಕ್ಷಾ ಠೇವಣಿ ಹಣವನ್ನು ಗಿಡಗಳನ್ನು ಕಟಾವು ಮುಗಿದ ನಂತರ ತಮಗೆ ಹಿಂತಿರುಗಿಸಲಾಗುವದು.ಸದರ ಟೆಂಡರನಲ್ಲಿ ಭಾಗವಹಿಸಿ ಟೆಂಡರನಲ್ಲಿ ಹೆಚ್ಚಿಗೆ ಬೇಡಿಕೆ ಸಲ್ಲಿಸಿ, ಪಸಲಿನ ಹಣವನ್ನು ಸಂಪೂರ್ಣವಾಗಿ ವಿಶ್ವವಿದ್ಯಾಲಯಕ್ಕೆ ತುಂಬಿ ಪಸಲು ಕಟಾವು ಅನುಮತಿ ಪಡೆದ ನಂತರವು ಏನಾದರು ತೊಂದರೆಗಳು ಬಂದಲ್ಲಿ ಮೇಲಾಧಿಕಾರಿಗಳು ಸದರ ವಿಷಯಕ್ಕೆ ಸಂಬಂದಿಸಿದಂತೆ ತೆಗೆದುಕೊಳ್ಳುವ ನಿರ್ಣಯವೇ ಅಂತಿಮ. ಅದಕ್ಕೆ ತಂಟೆ ತಕರಾರುಗಳನ್ನು ಪರಿಗಣಿಸಲಾಗುವದಿಲ್ಲಾ.

8. ನಿಯಮಾನುಸಾರ ಸರಕಾರಕ್ಕೆ ತುಂಬಬೇಕಾದ ಮತ್ತು ಅರಣ್ಯ ಇಲಾಖೆಗೆ ಎಲ್ಲಾ ತೆರಿಗೆಗಳನ್ನು ತಾವೇ ತುಂಬಿ ಅರಣ್ಯ ಇಲಾಖೆ ಪಾಸ ಪಡೆದು ಜರಾಕ್ಸ ಪ್ರತಿಗಳನ್ನು ಉದ್ಯಾನ ಇಲಾಖೆಗೆ ಸಲ್ಲಿಸಿ ಕಟ್ಟಿಗೆ ತೆಗೆದುಕೊಂಡು ಹೋಗಬೇಕು.ವಿದ್ಯುತ ತಂತಿಗಳಿಂದ ತೊಂದರೆಯಾದಲ್ಲಿ ತಾವೇ ಸದರ ವಿಭಾಗಕ್ಕೆ ಸಂಪರ್ಕಿಸಿ ಕೆಲಸ ಕೈಗೊಳ್ಳಬೇಕು.
9. ಪಸಲು ತೆಗೆಯುವಾಗ ಏನಾದರು ಅನಾಹುತ ಸಂಭವಿಸಿದಲ್ಲಿ ಕ.ವಿ.ವಿ. ಜವಾಬ್ದಾರವಲ್ಲಾ. ಪಸಲು ತೆಗೆದುಕೊಂಡು ಹೋಗುವಾಗ ಏನಾದರು ವಿಶ್ವವಿದ್ಯಾಲಯಕ್ಕೆ ಹಾನಿಯಾದಲ್ಲಿ ತಾವೇ ತುಂಬಿ ಕೊಡಬೇಕು, ಪಸಲು ತೆಗೆದುಕೊಂಡವರು ತಾವೇ ಪಸಲನ್ನು ಕಾಯಬೇಕು, ಟೆಂಡರ ನಡೆಯುವ ಸಮಯದಲ್ಲಿ ಶಾಂತತೆ ಕಾಪಾಡುವದು ತುಂಬಾ ಅವಶ್ಯ, ಟೆಂಡರ ಪ್ರಕ್ರಿಯಲ್ಲಿ ಶಾಂತತೆ ಕಾಪಾಡದಿದ್ದರೆ ಮತ್ತು ಏನಾದರು ತೊಂದರೆ ಯಾದಲ್ಲಿ ಟೆಂಡರನ್ನು ರದ್ದುಗೊಳಿಸಲಾಗುವದು ಇದಕ್ಕೆ ತಮ್ಮ ತಕಾರರಗಳನ್ನು ಪರಿಗಣಿಸಲಾಗುವದ್ದಿಲ್ಲಾ. ಹೆಚ್ಚಿನ ಮಾಹಿತಿಗಾಗಿ ಉದ್ಯಾನ ಇಲಾಖೆಯಲ್ಲಿ ಕಚೇರಿ ವೇಳೆಯಲ್ಲಿ ವಿಚಾರಿಸಬಹುದು.

**ಕುಲಸಚಿವರು**